ಸರ್ಕಾರಿ ಶಾಲೆಗಳನ್ನು ಮೇಲ್ದರ್ಜೆಗೇರಿಸುವುದು

2463(2304); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳ ಪೈಕಿ ಎಷ್ಟು ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ, ಮೂಲಭೂತ ಸೌಲಭ್ಯಗಳು, ಪರಿಕರಗಳನ್ನು ಒದಗಿಸಿ ಮೇಲ್ದರ್ಜೆಗೇರಿಸುವ ಅವಶ್ಯಕತೆ ಕಂಡು ಬಂದಿದೆ;

ಆ) 2014–15ನೇ ಸಾಲಿನಲ್ಲಿ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಇದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ)

1. ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳಿಗೆ ಉತ್ತಮ ಗುಣಮಟ್ಟ ಶಿಕ್ಷಣ ನೀಡಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

- 1 ರಿಂದ 3ನೇ ತರಗತಿಯ ಸರ್ಕಾರಿ ಶಾಲೆ ಮಕ್ಕಳಿಗೆ ನಲಿ–ಕಲಿ ಪದ್ಧತಿ ಅನುಸಾರ ಚಟುವಟಿಕೆ ಆಧಾರಿತ ಬೋಧನೆ ಕೈಗೊಂಡು ಮಕ್ಕಳಲ್ಲಿ ಉತ್ತಮ ಕಲಿಕೆ ಆಗುವಂತೆ ಕ್ರಮ ವಹಿಸಲಾಗುತ್ತಿದೆ.
- ಶಿಕ್ಷಕರಿಗೆ ಅವಶ್ಯಕತೆ ಆಧಾರಿತ ತರಬೇತಿಯನ್ನು ನೀಡಲಾಗುತ್ತಿದೆ.
- ಶಿಕ್ಷಕರು ಪಡೆದ ತರಬೇತಿಗಳನ್ನು ಬೋಧನೆಯಲ್ಲಿ ಯಾವ ರೀತಿ ಅನುಷ್ಠಾನ ಮಾಡುತ್ತಿದ್ದಾರೆಂದು ಕಂಡುಕೊಳ್ಳಲು ಶಾಲಾ ಭೇಟಿಯನ್ನು ಅಧಿಕಾರಿಗಳು ಹಮ್ಮಿಕೊಂಡು ಹಿಮ್ಮತಿಯನ್ನು ಪಡೆದು ಸೂಕ್ತ ಸಲಹೆಗಳನ್ನು ನೀಡಿ ಮಕ್ಕಳಲ್ಲಿ ಗುಣತ್ಮಕ ಕಲಿಕೆಯಾಗುವಂತೆ ಕ್ರಮವಹಿಸಲಾಗುತ್ತಿದೆ.
- ಮಕ್ಕಳ ಕಲಿಕಾ ಸಾಮರ್ಥ್ಯಗಳ ಮಟ್ಟವನ್ನು ಅಳೆಯಲು ಕೆ.ಎಸ್.ಕ್ಯೂ.ಎ.ಎ.ಸಿ ವತಿಯಿಂದ ಕಲಿಕಾ ಸಾಮರ್ಥ್ಯ ಮಾಪನಾ ಸಮೀಕ್ಷೆಗಳನ್ನು ಆಯ್ದ ಶಾಲೆಗಳಲ್ಲಿ ಕೈಗೊಳ್ಳಲಾಗುತ್ತದೆ ಬಂದ

ವರದಿಗಳ ವಿಶ್ಲೇಷಣೆಯ ಆದಾರದ ಮೇಲೆ ಕಲಿಕಾ ಸಾಮರ್ಥ್ಯ ಅಭಿವೃದ್ಧಿಗೆ ಪೂರಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

2. ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಅವಶ್ಯಕತೆಗೆ ಅನುಸಾರ ಹೆಚ್ಚುವರಿ ತರಬೇತಿ ಕೊಠಡಿ, ಶೌಚಾಲಯ, ಕುಡಿಯುವ ನೀರು ಇತರೆ ಸೌಲಭ್ಯಗಳನ್ನು ನೀಡಲಾಗುತ್ತಿದೆ

3. ರಾಜ್ಯದಲ್ಲಿ ಹೊಸದಾಗಿ ಪ್ರಾರಂಭಗೊಂಡ ಶಾಲೆಗಳು ಹಾಗೂ ಕಿರಿಯ ಪ್ರಾಥಮಿಕ ಶಾಲೆಗಳಿಂದ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಮೇಲ್ದರ್ಜೆಗೇರಿಸಿದ ಶಾಲೆಗಳಿಗೆ ಬೋಧನಾ ಕಲಿಕಾ ಪರಿಕರಗಳನ್ನು ಒದಗಿಸಲಾಗುತ್ತಿದೆ.

ಎಸ್‌ಎಸ್ ಎ ಅಡಿಯಲ್ಲಿ ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ 2009ರ ಅನ್ವಯ ಶಾಲಾ ಲಭ್ಯತೆಯನ್ನು ಒದಗಿಸುವ ಸಲುವಾಗ 3 ಕಿ.ಮೀ ವ್ಯಾಪ್ತಿಯೊಳಗಿನ ಜನವಸತಿ ಪ್ರದೇಶಗಳಲ್ಲಿ ಹಿರಿಯ ಪ್ರಾಥಮಿಕ ಶಾಲೆ ಲಭ್ಯತೆ ಇಲ್ಲದಿದ್ದಲ್ಲಿ ಆ ಜನವಸತಿ ಪ್ರದೇಶದಲ್ಲಿರುವ ಕಿರಿಯಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಯಾಗಿ ಮೇಲ್ದರ್ಜೆಗೇರಿಸಲು ಎಸ್ ಎಸ್ ಎ ಯಲ್ಲಿ ಅವಕಾಶ ಇರುತ್ತದೆ. 2014–15ನೇ ಸಾಲಿನ ಎಸ್ ಎಸ್ ಎ ವಾರ್ಷಿಕ ಕ್ರಿಯಾಯೋಜನೆಯಲ್ಲಿ ರಾಜ್ಯದ 3 ಜಿಲ್ಲೆಗಳ 5 ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಮೇಲ್ದರ್ಜೆಗೇರಿಸಲು ಅವಶ್ಯಕತೆ ಕಂಡುಬಂದಿದ್ದು, ಕೇಂದ್ರ ಸರ್ಕಾರದ ಮುಂದೆ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಅದರ ಅನುಸಾರ ಕೊಪ್ಪಳ ಜಿಲ್ಲೆಯ 1, ಬೀದರ್ ಜಿಲ್ಲೆಯ 2 ಹಾಗೂ ರಾಯಚೂರು ಜಿಲ್ಲೆಯ 2 ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಮೇಲ್ದರ್ಜೆಗೇರಿಸಲು ಅನುಮೋದನೆ ದೊರೆತಿರುತ್ತದೆ. ಮೇಲ್ದರ್ಜೆಗೇರಿಸಿದ ಪ್ರತಿ ಶಾಲೆಗೆ ಮೂರು ಬೋಧನಾ ಕೊಠಡಿಗಳಂತೆ ಉತ್ತಮ ಗುಣಮಟ್ಟದ

ಶಿಕ್ಷಣಕ್ಕಾಗಿ 15 ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲು ಸದರಿ ಶಾಲೆಗಳ ಎಸ್.ಡಿ.ಎಂ.ಸಿ ಖಾತೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.

ಆರ್.ಎಂ.ಎಸ್.ಎ. ರಾಜ್ಯದಲ್ಲಿರುವ 4,467 ಸರ್ಕಾರಿ ಪ್ರೌಢಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ, ಮೂಲಭೂತ ಸೌಲಭ್ಯಗಳನ್ನು ಪರಿಕರಗಳನ್ನು ಒದಗಿಸಿ ಮೇಲ್ದರ್ಜೆಗೇರಿಸುವ ಅವಶ್ಯಕತೆ ಕಂಡು ಬಂದಿರುತ್ತದೆ.

ಆ) 2014–15ನೇ ಸಾಲಿನಲ್ಲಿ ಅನುಮೋದನೆಯಾದ 5 ಕಿರಿಯ ಪ್ರಾಥಮಿಕ ಶಾಲೆಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ.

- 2014–15ನೇ ಸಾಲಿನಲ್ಲಿ ರಾಜ್ಯದ 4467 ಸರ್ಕಾರಿ ಪ್ರೌಢಶಾಲೆಗಳಿಗೆ ಕಲಿಕಾ ವಾತಾವರಣವನ್ನು ಉತ್ತಮ ಪಡಿಸಿಕೊಳ್ಳುವ ಸಲುವಾಗಿ ಪ್ರತಿ ಶಾಲೆಗೆ ರೂ. 50000 ದಂತ ಶಾಲಾ ಅನುದಾನ ನೀಡಲಾಗಿದೆ.
- ಕಲಿಕೆಯಲ್ಲಿ ಹಿಂದುಳಿದ 18700 ಪ್ರೌಢಶಾಲಾ ವಿದ್ಯಾರ್ಥಿಗಳ ಕಲಿಕೆ ಉತ್ತಮಪಡಿಸಲು ಆರ್.ಎಂ.ಎಸ್.ಎ. ಕಾರ್ಯಕ್ರಮದಡಿಯಲ್ಲಿ ರೂ. 93.50 ಲಕ್ಷಗಳ ವೆಚ್ಚದಲ್ಲಿ ವಿಶೇಷ ತರಬೇತಿಯನ್ನು ನೀಡಲು ಶಾಲಾ ಹಂತದಲ್ಲಿ ಕ್ರಮವಹಿಸಲಾಗಿದೆ.
- ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳ ಶಿಕ್ಷಕರಿಗೆ 5 ದಿನಗಳ ಸೇವಾ ನಿರತ ತರಬೇತಿಯನ್ನು ಜಿಲ್ಲಾ ಮಟ್ಟದಲ್ಲಿ ನೀಡಲಾಗಿದೆ.
- ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳಲ್ಲಿ ಕೇಂದ್ರಿಯ ವಿದ್ಯಾಲಯಗಳ ಮಾದರಿಯ ಒಟ್ಟು 74 ಆದರ್ಶಶಾಲೆಗಳನ್ನು ಆಂಗ್ಲ ಮಾಧ್ಯಮದಲ್ಲಿ ನಡೆಸಲಾಗುತ್ತಿದೆ.
- ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟಿನಡಿಯಲ್ಲಿ (ಎನ್.ಎಸ್.ಕೂಎಫ್) ಒಟ್ಟು 100 ಸರ್ಕಾರಿ ಪ್ರೌಢಶಾಲೆಗಳಲ್ಲಿ ಕೌಶಲ್ಯ ತರಬೇತಿ ನೀಡಲಾಗುತ್ತಿದೆ.

- ರಾಜ್ಯದಲ್ಲಿ 4467 ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಸ್ವಯಂ ರಕ್ಷಣಾ ತರಬೇತಿಯನ್ನು ಶಾಲಾ ಮಟ್ಟದಲ್ಲಿ ನೀಡಲಾಗುತ್ತಿದೆ. (ಕರಾಟೆ)

ರಾಜ್ಯದಲ್ಲಿ ಒಟ್ಟು 61 ಹೆಣ್ಣು ಮಕ್ಕಳ ವಿದ್ಯಾರ್ಥಿನಿಲಯಗಳಲ್ಲಿ ಒಟ್ಟು 2824 ವಿದ್ಯಾರ್ಥಿನಿಯರಿಗೆ ಸೌಲಭ್ಯ ನೀಡಲಾಗಿದೆ.

ಇ) ಪ್ರತಿ ಶಾಲೆಗೆ ಮೂರು ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕಾಗಿ ರೂ. 19.50 ಲಕ್ಷದಂತೆ, ಒಟ್ಟಾರೆ ಅನುಮೋದನೆಗೊಂಡ 5 ಶಾಲೆಗಳಿಗೆ ರೂ. 97.50 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ಇದರೊಂದಿಗೆ ಟಿ.ಎಲ್.ಇ.ಗಳಿಗೆ ಪ್ರತಿ ಶಾಲೆಗೆ ರೂ. 50,000/–ರಂತೆ ನೀಡಲಾಗಿದೆ.

ಆರ್.ಎಂ.ಎಸ್.ಎ. ಕಾರ್ಯಕ್ರಮದಡಿಯಲ್ಲಿ –

- 2014–15ನೇ ಸಾಲಿನಲ್ಲಿ 4467 ಸರ್ಕಾರಿ ಪ್ರೌಢಶಾಲೆಗಳಿಗೆ ರೂ. 2233.50 ಲಕ್ಷಗಳು ಹಾಗೂ 517 ಸಮಾಜ ಕಲ್ಯಾಣ ಇಲಾಖೆ ಶಾಲೆಗಳಿಗೆ ರೂ. 258.50 ಲಕ್ಷಗಳು ಶಾಲಾ ಅನುದಾನ ಬಿಡುಗಡೆ ಮಾಡಲಾಗಿದೆ.
- ವಿಶೇಷ ತರಬೇತಿಗಳಿಗೆ ರೂ. 93.50 ಲಕ್ಷಗಳು
- ತರಬೇತಿಗೆ 542.90 ಲಕ್ಷಗಳು
- ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟಿನಡಿಯಲ್ಲಿ (ಎನ್.ಎಸ್.ಕ್ಯೂಎಫ್) ಒಟ್ಟು 100 ಸರ್ಕಾರಿ ಪ್ರೌಢಶಾಲೆಗಳಲ್ಲಿ ಕೌಶಲ್ಯ ತರಬೇತಿಗಾಗಿ 130.0 ಲಕ್ಷಗಳು
- ರಾಜ್ಯದಲ್ಲಿ 4467 ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಸ್ವಯಂ ರಕ್ಷಣಾ ತರಬೇತಿಗಾಗಿ ಒಟ್ಟು 136.26 ಲಕ್ಷಗಳು.
  ರಾಜ್ಯದಲ್ಲಿ ಒಟ್ಟು 61 ಹೆಣ್ಣು ಮಕ್ಕಳ ವಿದ್ಯಾರ್ಥಿನಿಲಯಗಳಲ್ಲಿ ಒಟ್ಟು 2824 ವಿದ್ಯಾರ್ಥಿನಿಯರಿಗೆ ರೂ 383.82 ಲಕ್ಷಗಳು.